# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 79/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀ ಅಜಿತ್ ಕುಮಾರ್ ಕರ್ಣ್ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ | ಶ್ರೀ ಲಲೀತೇಶ್ವರ್ ಪ್ರಸಾದ್ ಕರ್ಣ್ | **09.12.2024** |
| **ವಯಸ್ಸು** | ಃ | **58** ವರ್ಷ | |
| **ವೃತ್ತಿ** | ಃ | ಜನರಲ್ ಮ್ಯಾನೇಜರ್, ಭಾರತೀಯ ರಿಸರ್ವ್ ಬ್ಯಾಂಕ್, ನೋಟ್ ಮುದ್ರಣ್, ಸಾಲ್ಬೊಣಿ, ಪಶ್ಚಿಮ ಬಂಗಾಳ | **ಪ್ರಾ.ಸಾ. ಃ 01** |
| **ವಾಸಸ್ಥಳ** | ಃ | ಸಾಲ್ಬೊಣಿ, ಪಶ್ಚಿಮ ಬಂಗಾಳ | **ಚಾ.ಸಾ. ಃ 01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ದಿಃ*01.04.2015* ರಿಂದ ದಿಃ*31.07.2021* ರವರೆಗೆ ಮೈಸೂರು ಭಾರತೀಯ ರಿಸರ್ವ್ ಬ್ಯಾಂಕ್, ನೋಟ್ ಮುದ್ರಣ ಪ್ರೈ.ಲಿ ನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ. *2021* ರ ಜನವರಿಯಲ್ಲಿ ನಾನು ಅಸಿಸ್ಟಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಆ ಕಾಲಕ್ಕೆ ನಾನು ದಿನಾಲು ಬೆಳಗ್ಗೆ ಮತ್ತು ಸಂಜೆ ನಮ್ಮ ಕ್ಯಾಂಪಸ್ ನಲ್ಲಿ ಸೆಕ್ಯೂರಿಟಿ ತಪಾಸಣೆಗಾಗಿ ಹೊಗುತ್ತಿದ್ದೆ. ಆ ಕಾಲಕ್ಕೆ ಬೆಳಗ್ಗೆ ವೇಳೆಯಲ್ಲಿ ಒಬ್ಬನೇ ಹೊಗುತ್ತಿದ್ದೆ ಮತ್ತು ಸಂಜೆ ರಘುವರನ್ ಮತ್ತು ಕಮಲಾ ಪ್ರಸಾದ್ ಇವರೊಂದಿಗೆ ಹೊಗುತ್ತಿದ್ದೆ. ಆ ಕಾಲಕ್ಕೆ ದಿಃ*12.01.2021* ರಂದು ಮಧ್ಯಾಹ್ನದ ವೇಳೆಯಲ್ಲಿ ನಾವು ಜಂಗಲ್ ಏರಿಯಾದಲ್ಲಿ ನಮ್ಮ ಗೆಸ್ಟ್ ಹೌಸ್ ಹಿಂಭಾಗದಲ್ಲಿ *2-3* ಗಂಧದ ಮರಗಳನ್ನು ಹೊಸದಾಗಿ ಕಡಿದಿರುವುದು ಕಂಡುಬಂದಿತ್ತು. ಆ ಕಾಲಕ್ಕೆ ನಾವು ಸೆಕ್ಯೂರಿಟಿಯನ್ನು

ಹೆಚ್ಚಿಸಲು ವ್ಯವಸ್ಥೆಯನ್ನು ಮಾಡಿದ್ದೆವು ಮತ್ತು ಸೆಕ್ಯೂರಿಟಿ ಸೂಪರ್ ವೈಸರ್ ಗೆ ಹೆಚ್ಚು ರೌಂಡ್ಸ್ ಮಾಡುವಂತೆ ಹೇಳಿದ್ದೆವು. ಆ ದಿನ ನಾವು ಬೇರೆ ಕೆಲಸಗಳಲ್ಲಿ ಬ್ಯೂಸಿ ಇದುದ್ದರಿಂದ ಪೊಲೀಸ್ ಕಂಪ್ಲೇಂಟ್ ಕೊಟ್ಟಿರಲಿಲ್ಲ. ದಿಃ***13.01.2021*** ರಂದು ರಾತ್ರಿ ***8.30*** ರ ವೇಳೆಗೆ ಸೆಕ್ಯೂರಿಟಿ ಸೂಪರ್ ವೈಸರ್ ನನ್ನ ಬಳಿ ಬಂದಾಗ ಅವರಿಗೆ ಸೆಕ್ಯೂರಿಟಿ ವ್ಯವಸ್ಥೆಯನ್ನು ಹೆಚ್ಚಿಸುವಂತೆ ಹೇಳಿದ್ದೆ. ಅದೇ ದಿನ ರಾತ್ರಿ ***8.45*** ರ ವೇಳೆಗೆ ಬೌಂಡ್ರಿ ವಾಲ್ ಬಳಿ ಯಾರೋ ವ್ಯಕ್ತಿಗಳು ತಿರುಗಾಡಿದ್ದನ್ನು ಸೆಕ್ಯೂರಿಟಿ ಗಾರ್ಡ್ ಗಮನಿಸಿ ಆ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಯಾರು ಇರಲಿಲ್ಲ ಎಂದು ಕಂಡುಬಂದಿತ್ತು. ಆ ಬಗ್ಗೆ ಸೆಕ್ಯೂರಿಟಿ ಸೂಪರ್ ವೈಸರ್ ಗೆ ತಿಳಿಸಿದ್ದ ಮತ್ತು ಆ ದಿನ ರಾತ್ರಿ *10* ಗಂಟೆಗೆ ಶಿಫ್ಟ್ ಬದಲಾವಣೆ ಆಗಿತ್ತು. ಆ ಕಾಲಕ್ಕೆ *10* ಗಂಟೆ ನಂತರದ ಶಿಫ್ಟ್ ನ ಸೆಕ್ಯೂರಿಟಿ ಗೆ ಎಚ್ಚರದಿಂದ ಇರುವಂತೆ ಹೇಳಲಾಗಿತ್ತು. ಆ ಕಾಲಕ್ಕೆ ರಾತ್ರಿ *10.30* ಗಂಟೆಗೆ ನಮ್ಮ ಕ್ಯಾಂಪಸ್ ನ ಒಳಗಿನಿಂದ ಒಬ್ಬ ವ್ಯಕ್ತಿ ಬೌಂಡ್ರಿ ವಾಲ್ ಕಡೆಗೆ ಬಂದು ಹೊರಗಡೆ ಹೋಗಲು ಪ್ರಯತ್ನ ಮಾಡಿದ್ದ. ಆ ಕಾಲಕ್ಕೆ ಸೆಕ್ಯೂರಿಟಿ ಸಿಬ್ಬಂದಿಗಳು ಆ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನ ಮಾಡಿದ್ದರು. ಅವರನ್ನು ನೋಡಿ ಆ ವ್ಯಕ್ತಿ ಪುನಃ ಜಂಗಲ್ ಕಡೆಗೆ ಹೋಗಿದ್ದ. ಆ ಕಾಲಕ್ಕೆ ಸೆಕ್ಯೂರಿಟಿ ಗಾರ್ಡ್ ನಮಗೆ ಮಾಹಿತಿ ಕೊಟ್ಟಿದ್ದರಿಂದ ನಾನು ಸೆಕ್ಯೂರಿಟಿ ಸಿಬ್ಬಂದಿಗಳಿಗೆ ಮತ್ತು *CISF* ಸಿಬ್ಬಂದಿಗಳಿಗೆ ಮಾಹಿತಿ ಕೊಟ್ಟಿದ್ದೆವು ಮತ್ತು ಎಲ್ಲಾ ಬಾಗಿಲುಗಳನ್ನು ಮುಚ್ಚಿದ್ದೆವು ಮತ್ತು ಹೆಚ್ಚುವರಿ ಸಿಬ್ಬಂದಿಗಳನ್ನು ಬೌಂಡ್ರಿ ವಾಲ್ ಬಳಿ ನೇಮಿಸಿದ್ದೆವು ಮತ್ತು *combing* ಅನ್ನು ಪ್ರಾರಂಭಿಸಿದ್ದೆವು. ಕ್ಯಾಂಪಸ್ ನ ಎಲ್ಲಾ ರಸ್ತೆಗಳನ್ನು ಕವರ್ ಮಾಡಿದ್ದೆವು. ಆ ಕಾಲಕ್ಕೆ ಜಂಗಲ್ ನಲ್ಲಿದ್ದ ಅನುಮಾನಸ್ಪದ ವ್ಯಕ್ತಿಗಳು ಜಂಗಲ್ ನ ಇನ್ನೊಂದು ಬದಿಗೆ ಹೋಗಿ ಕಾಂಪೌಂಡ್ ಹಾರಲು ಪ್ರಯತ್ನ ಮಾಡಿದ್ದರು ಹೆಚ್ಚುವರಿ ಸೆಕ್ಯೂರಿಟಿ ಸಿಬ್ಬಂದಿಗಳನ್ನು ನೇಮಿಸಿದ್ದರಿಂದ ಅವರನ್ನು ನೋಡಿ ಪುನಃ ಜಂಗಲ್ ನ ಒಳಗೆ ಹೋಗಿದ್ದರು. ಆ

ಸ್ಥಳದಲ್ಲಿದ್ದ ಸೆಕ್ಯೂರಿಟಿ ಸಿಬ್ಬಂದಿಗಳು ನಮಗೆ ಮೊಬೈಲ್ ಮೂಲಕ ಆ ವಿಷಯ ತಿಳಿಸಿದ್ದರು ಆಗ ಅಂದಾಜು *40* ಜನ ಸೆಕ್ಯೂರಿಟಿ ಮತ್ತು *CISF* ಸಿಬ್ಬಂದಿಗಳನ್ನು ಆ ಸ್ಥಳಕ್ಕೆ ಕಳುಹಿಸಿದ್ದೆವು. ಆ ಕಾಲಕ್ಕೆ ಆ ಸ್ಥಳದಲ್ಲಿ ಬೆಳಗ್ಗೆ ವರೆಗೆ ಆ ವ್ಯಕ್ತಿಗಳನ್ನು ಹಿಡಿಯುವ ಸಲುವಾಗಿ ಕಾಯ್ದುಕೊಂಡು ಇದ್ದೆವು ಆದರೆ ಆ ಜಾಗ ತುಂಬಾ ದೊಡ್ಡದಾದ ಅರಣ್ಯವಾದ್ದರಿಂದ ಅವರನ್ನು ಹುಡುಕಲು ಆಗಿರಲಿಲ್ಲ. ನಂತರ ಬೆಳಗ್ಗೆ *6* ಗಂಟೆಗೆ ಅರಣ್ಯದ ಒಳಗಿನಿಂದ ಇಬ್ಬರು ವ್ಯಕ್ತಿಗಳು ಹೊರಗೆ ಬಂದಿದ್ದರು ಅವರಿಬ್ಬರನ್ನು ಹಿಡಿದು ವಿಚಾರಿಸಿದ್ದೆವು ಮತ್ತು ಅರಣ್ಯದ ಒಳಗೆ ಇರುವ ಇತರೆ ವ್ಯಕ್ತಿಗಳಿಗೊಸ್ಕರ ಹುಡುಕಾಡಿದ್ದೆವು ಆದರೆ ಬೇರೆ ಯಾರು ಅಲ್ಲಿ ಕಂಡಿರಲಿಲ್ಲ ಮದ್ಯಾಹ್ನ *1* ಗಂಟೆ ವೇಳೆಗೆ ಅಲ್ಲಿ ಇಬ್ಬರೇ ವ್ಯಕ್ತಿಗಳು ಇರುವುದಾಗಿ ನಮಗೆ ಖಾಯಂ ಆಗಿತ್ತು.

*2.* ಆ ಕಾಲಕ್ಕೆ ಆ ಇಬ್ಬರು ವ್ಯಕ್ತಿಗಳನ್ನು ಮೇಟಗಳ್ಳಿ ಪೋಲೀಸ್ ಠಾಣೆಯ ಸಿಬ್ಬಂದಿಗಳ ವಶಕ್ಕೆ ಕೊಟ್ಟಿದ್ದೆವು. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ-*1* ಮತ್ತು ಸಹಿಯನ್ನು ನಿ.ಪಿ-*1*(ಎ) ಎಂದು ಗುರುತಿಸಿದೆ. ಆ ವ್ಯಕ್ತಿಗಳನ್ನು ಹಿಡಿದುಕೊಂಡಾಗ ಅವರ ಹೆಸರು ಮತ್ತು ವಿಳಾಸವನ್ನು ಕೇಳಿದ್ದೆವು. ಅವರ ಹೆಸರು ರಘು ಮತ್ತು ಮಂಜುನಾಥ ಎಂದು ಗೊತ್ತಾಗಿತ್ತು. ಈಗ ಆ ರಘು ಮತ್ತು ಮಂಜುನಾಥ ಇವರನ್ನು ನೋಡಿದರೆ ಗುರುತಿಸುತ್ತೇನೆ. ಈಗ ಕೋರ್ಟ್ ಮುಂದೆ ಇರುವ *2* ನೇ ಆರೋಪಿತ ಆ ಇಬ್ಬರು ವ್ಯಕ್ತಿಗಳ ಪೈಕಿ ಮಂಜುನಾಥ ಇರುತ್ತಾನೆ. ದೂರು ಕೊಟ್ಟ ಬಳಿಕ ಪೊಲೀಸರು ನಮ್ಮ ಕ್ಯಾಂಪಸ್ ಗೆ ಬಂದು ಮಹಜರ್ ಮಾಡಿದ್ದರು. ಆ ಕಾಲಕ್ಕೆ ಪೊಲೀಸರು ಆ ವ್ಯಕ್ತಿಗಳ ಬಟ್ಟೆಗಳನ್ನು, ಗಿಡಗಳನ್ನು ಕತ್ತರಿಸಲು ಉಪಯೋಗಿಸಿದ್ದ ವಸ್ತುಗಳನ್ನು, ಗಂಧದ ಗಿಡದ ಭಾಗಗಳನ್ನು, ಮೊಟಾರ್ ಸೈಕಲ್ ನ ಕೀ, ಮೊಟಾರ್ ಸೈಕಲ್ ಅನ್ನು

ಅಮಾನತ್ತು ಪಡಿಸಿಕೊಂಡಿದ್ದರು. ಆ ವಸ್ತುಗಳನ್ನು ನಮ್ಮ ಕ್ಯಾಂಪಸ್ ನಲ್ಲಿರುವ ಅರಣ್ಯದಲ್ಲಿ ಆ ವ್ಯಕ್ತಿಗಳೇ ತೋರಿಸಿದ್ದರು. ಆ ಕಾಲಕ್ಕೆ ನಾನು ಸಹ ಹಾಜರಿದ್ದೆ. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ-*2* ಮತ್ತು ಸಹಿಯನ್ನು ನಿಪಿ-*2(*ಎ*)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ *14* ಪೊಟೋಗಳು ಮಹಜರ್ ಕಾಲಕ್ಕೆ ಪೋಲೀಸ್ ಠಾಣೆ ಬಳಿ ಮತುತ ನಮ್ಮ ಕ್ಯಾಂಪಸ್ ಬಳಿ ತೆಗೆದ ಪೊಟೋಗಳು ಇವೆ. ಸದರಿ ಪೊಟೋಗಳನ್ನು ನಿ.ಪಿ-*3* ರಿಂದ *16* ಎಂದು ಗುರುತಿಸಿದೆ. ಆ ಪೊಟೋಗಳಲ್ಲಿ ಕಾಣುವ ವ್ಯಕ್ತಿಗಳು ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ರಘು ಮತ್ತು ಮಂಜುನಾಥ್ ಎನ್ನುವ ವ್ಯಕ್ತಿಗಳು ಇದ್ದಾರೆ. ಮಹಜರ್ ಬಳಿಕ ಅದೇ ದಿನ ನನ್ನನ್ನು ಪುನಃ ವಿಚಾರಣೆ ಮಾಡಿದ್ದರು. ನಂತರ ಪೊಲೀಸರು ನಮ್ಮ ಕ್ಯಾಂಪಸ್ ನ ಸಿಸಿ ಟಿವಿ ಪುಟೇಜ್ ಗಳನ್ನು ಪೆನ್ ಡ್ರೈವ್ ಗಳಲ್ಲಿ ಪಡೆದುಕೊಂಡಿದ್ದರು. ನಮ್ಮ ಸಿಬ್ಬಂದಿ ರಘುವರನ್ ಇವರು ಅದನ್ನು ಕೊಟ್ಟಿದ್ದಾರೆ.

**ಈ ವೇಳೆಗೆ ಶ್ರೀಗಂಧದ ಕಟ್ಟಿಗೆಗಳನ್ನು ಈ ದಿನ ಕೋರ್ಟ್ ಮುಂದೆ ಹಾಜರುಪಡಿಸದೇ ಇರುವ ಕಾರಣ ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೀ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು